ಏರುಪೇರಾದ ಕಡ್ಡಿ ಸರಿಮಾಡುತ್ತಾ ಕೋಳಿ ಕೆದರಿದ್ದ ಮಣ್ಣ ಗುಡಿಸಿದಳು. ಅವ್ವ ಪರಕೆ ಎತ್ತಿದ್ದು ನನನ್ನು ಹೊಡೆಯಲು ಅಲ್ಲ ಎಂದು ಖಾತರಿಯಾದ ಮೇಲೆ ನಿರಾಳವಾಗಿ ಒಳಗೆ ಹೋದನು. ಹಸಿರುಗಾಯಿ ಒಳಗಿಟ್ಟು ಕನ್ನಡಿಯಲ್ಲಿ ಮುಖ ನೋಡುತ್ತಿದ್ದ.

ಮದುವೆಗೆ ಹೊರಟ ಕಮಾನುಗಾಡಿಗಳ ಕೊರಳ ಗಂಟೆಗಳ ಗಳಗಳ ಸದ್ದು ಕೇಳಿತು. ತ್ಯಾಗನು ಬೆರಳು ಚೀಪುತ್ತ ಲೈನಾಗಿ ಒಂದರ ಹಿಂದೆ ಒಂದರಂತೆ ಹೊರಟು ನಿಂತ ಕಮಾನು ಗಾಡಿಗಳ ಕಡೆ ನೋಡುತ್ತಾ ನಿಂತನು, ಅಂಗಳದಲ್ಲಿ ಒಬ್ಬನೇ. ಗಾಡಿಗಳು ಕ್ಷಣಾರ್ಧದಲ್ಲೇ ಮದುವೆಗೆ ಜನ ತುಂಬಿಕೊಂಡು ಊರು ಬಿಟ್ಟವು. ಈ ಗಾಡಿಗಳ ತೊಟ್ಟಿಲ ತುಂಬ ಹುಡುಗರ, ಸಂಬಂಧಿಗಳ ಗೌಜು ಗದ್ದಲ. ಮದುವೆಗೆಂದು ಬೇರೊಂದು ಊರಿಗೆ ಹೋಗುತ್ತಿರುವ ಸಂಭ್ರಮ ಇಡೀ ಊರಿಗೆ ಎದ್ದು ಕಾಣುತ್ತಿತ್ತು. ನಾಯಕರ ಹುಡುಗರು, ಮತ್ತೊಂದು ಕಡೆ ತಳವಾರರ ಹುಡುಗರು ಮೂಕಿಯ ಮೇಲೆ ಕುಳಿತು ಎತ್ತಿನ ಬಾಲ ಮುರಿದು ಬಾರುಕೋಲಿನಿಂದ ಎತ್ತುಗಳಿಗೆ ಚಾಟಿ ಬೀಸಿದಂತೆಲ್ಲ ಎತ್ತುಗಳು ಸಿರ್ರನೆ ನುಗ್ಗಿ ಧೂಳೆಬ್ಬಿಸಿ ಹೋಗುತ್ತಿದ್ದರೆ ಸಂಭ್ರಮಕ್ಕೆ ಮತ್ತಷ್ಟು ಮೆರಗು. ಗಾಡಿಗಳು ಊರಿಂದ ಕಣ್ಮರೆಯಾಗುವುದನ್ನು ನೋಡುತ್ತಾ ನಿಂತ ತ್ಯಾಗನ ಮನಸು ಖಾಲಿ ಹಾಳೆಯಂತಾಗಿತ್ತು. ಅವನ ಗುರುತಿಸಿದ ಬಾಗಮ್ಮ ಅಡುಗೆ ಮನೆ ಕಿಟಕಿಯಿಂದ ಇಣುಕಿ ದ್ಯಾವಕ್ಕನನ್ನು ಮಾತಾಡಿಸಿ, 'ಅಕ ಅದ್ಯಾಕಕ್ಕ ನಿನ್ನುಡ್ಗನ್ನ ಮದುವೆಗೆ ಕಳಿಸಿಲ್ಲ?' ಅಂದಳು. ಇದನ್ನು ಕೇಳಿದ ದ್ಯಾವಕ್ಕ 'ಅಯ್ಯೋ ಇವನ್ಯಾಕ್ ಬಿಡವ್ವ' ಎಂದು ಹೇಳುವಾಗ ದನಿ ತುಂಬಾ ಮೆತ್ತಗಾಯಿತು.

* * *

ಸುಂಯ್ ಎಂದು ಸುಳಿಗಾಳಿ ಬೀಸುತ್ತಿತ್ತು. ಕಿಟಕಿ ಬಾಗಿಲಿನಿಂದ ನುಗ್ಗಿ ಬಂದ ಗಾಳಿಗೆ ಹಚ್ಚಿದ ಒಲೆ ಉರಿ ವಾಲಾಡುತ್ತಿತ್ತು. 'ಅಯ್ಯೋ ಗಾಳಿ' ಎಂದು ಅದೇನೋ ಹೊರಗೆ ಹಾಕಿದ್ದು ನೆನಪಾಗಿ ದ್ಯಾವಕ್ಕ ಹೊರಗೆ ಓಡಿಹೋದಳು.

ಗಾಳಿ ಎದ್ದು ಬರುಬರುತ್ತ ಸುಂಟರಗಾಳಿ ಆಗಿ ಊರು ಸುತ್ತಲ ಮರ, ಊರೊಳಗಿನ ಮನೆಗಳು, ವಪ್ಪಾರು ಮೇಲೆ ಕೆಳಗೆ ಆಡಿ ಇಡೀ ಊರ ತುಂಬ ಧೂಳು ತುಂಬಿಕೊಂಡು ಕಣ್ಣು ಬಿಡಲಾಗದೆ ಒಳಗೆ ಓಡಿದರು. ಎದ್ದ ಗಾಳಿಗೆ ಬಿದ್ದ ಎಲೆಗಳು ಮೇಲೆದ್ದು ಪಟಪಟ ಮುಖಕ್ಕೆ ಹೊಡೆಯುತ್ತಿದ್ದ ರಭಸಕ್ಕೆ ಮಾಳದಲ್ಲಿದ್ದವರು ಹೆದರಿ ಮನೆ ಸೇರಿಕೊಳ್ಳಲು ಊರತ್ತ ದೌಡಾಯಿಸುತ್ತಿದ್ದರು. ಮದುವೆ ಮನೆ ಅಂಗಳದಲ್ಲಿ ಕುರ್ಚಿಗಳು ಹಸಿರು ಚಪ್ಪರ ಕಣ್ಣು ಹಾಯುವವರೆಗೂ ಎದ್ದು ಹಾರಿಹೋಗುತ್ತಿದ್ದವು.

ಊರಿನ ವಾತಾವರಣ ಬರಬರುತ್ತ ಸುಂಟರಗಾಳಿಯಾಗಿ ಎದ್ದಿದ್ದನ್ನು ನೋಡಿ ಜನ ಹೆದರಿ, ಹೊಲ ತೋಟದಲ್ಲಿದ್ದವರು ಎಲ್ಲೋ ತಮ್ಮ ಪಾಡಿಗೆ ತಾವು ಮೇಯುತ್ತಿದ್ದ ಎತ್ತು, ಎಮ್ಮೆ, ಆಡು ಕುರಿಗಳ ಬೆನ್ನತ್ತಿದ್ದರು. ಈ ಗಾಳಿ ಹೊಡೆತಕ್ಕೆ ಸುರುಳಿ ಸುತ್ತಿಕೊಳ್ಳುತ್ತ, ಆಕಾಶಕ್ಕೂ ನೆಲಕ್ಕೂ ಏಳುತ್ತಾ ಬೀಳುತ್ತ, ಅತ್ತಿತ್ತ ತೂರಾಡುತ್ತಿದ್ದ ಮರಗಳಿಂದ ಗರಿ ಕಾಯಿ ಕುರಂಬಳೆಗಳು ತೂರಿ ಹೋಗುತ್ತಿದ್ದವು.

ತ್ಯಾಗ ಹೊರಗೆ ಇದ್ದವನು ಇದನ್ನು ನೋಡಿ ತೋಟಗಳ ಕಡೆಗೆ ಓಡಿದ. ತ್ಯಾಗನಿಗೆ ತಲೆ ಬುಡ ಗೊತ್ತಾಗದೆ ತಾನು ಗೊಂದಲದಲ್ಲಿ ಬಿದ್ದು ಯಾವುದು ಆಯ್ದುಣದು, ಯಾವುದು ಬಿಡದು ಅನ್ನಿಸಿ, ಯಾರಾರೂ ಕಂಡಾರು ಎಂಬ ಆತಂಕ ಹುಟ್ಟಿ ಸುತ್ತೆಲ್ಲ ಕಣ್ಣಾಡಿಸಿದನು. ಸಾಕಷ್ಟು ಕಾಯಿ ಬಿದ್ದಿದ್ದರಿಂದ ಒಂದಷ್ಟು ಕಾಯಿಗಳನ್ನು ಎತ್ತಿಕೊಂಡು ಅವನ್ನು ಕಂಕುಳಲ್ಲಿ ಅವಚಿ ಓಡಲು ಯತ್ನಿಸಿದ. ಗಾಳಿಯ ಹೊಡೆತಕ್ಕೆ ಸಿಕ್ಕು ಅತ್ತಿತ್ತ ತೂರಾಡುತ್ತಾ ಗಾಳಿ ತೋಟಗಳನ್ನು ಧೂಳೀಪಟ ಮಾಡುತ್ತಿರುವುದನ್ನು ನೋಡಿ ಬೆಚ್ಚಿ ಮನೆಯತ್ತ ತಿರುಗಿದ.

ಎದುರು ದಿಕ್ಕಿನ ಬೇಲಿಯಿಂದ ಅದೇನೋ ಭರ್ರನೆ ಎದ್ದಂತಾಗಲು ಅದೇನು ಎಂದು ನೋಡುವಷ್ಟರಲ್ಲಿ 'ಥೂ... ಆಕ್ಲ ಕೆಳಿಕೆ ಕಾಯ್ತ? ಬೋಸುಡಿ ಮಗನೆ' ಅಂತಂದ ಆ ತೋಟದ ಮಲ್ಲ ಚಂಗನ ಹಾರಿ, ತ್ಯಾಗನ ಕೈ ನುಲುಚಿ, ಬೆನ್ನಿಗೆ ದಬ್ಬನೆ ಗುದ್ದಿದ. ಆ ಗುದ್ದು ಈ ಗಾಳಿ ಹೊಡೆತಕ್ಕಿಂತಲೂ ರಭಸವಾಗಿ ಅಪ್ಪಳಿಸಿದ್ದರಿಂದ ಅವನ ಕಂಕುಳಲ್ಲಿದ್ದ ಕಾಯಿಗಳು ಅತ್ತಿತ್ತ ಚೆಲ್ಲಾಡಿದವು. ತ್ಯಾಗನು ಮುಗ್ಗರಿಸಿ ಬಿದ್ದು ಚಿಟ್ಟನೆ ಚೀರಿದ. ಮತ್ತೆ ಮಲ್ಲ ಓಡಿ ಬಂದು ಹಿಡಿದ. ಸಾವೇ ಮಲ್ಲನ ರೂಪದಲ್ಲಿ ಬಂದು ಹಿಡಿದಂತೆ ಬೆಚ್ಚಿದ. ಎಂಗೆಂಗೋ ಮಲ್ಲನ ಕೈಯಿಂದ ನುಣುಚಿಕೊಂಡ ತ್ಯಾಗನು ತೋಟದ ತದ್ವಿರುದ್ಧವಾಗಿ ಗದ್ದೆಯತ್ತ ಮುಖಮಾಡಿ ಒಂದೇ ಉಸಿರಿಗೆ ಓಡುತ್ತಿದ್ದನು.

'ಅಯ್ಯೋ ಸೂ... ಮಗನೆ... ನಿಂತ್ಕಳ್ಳ ಇಲ್ಲಿ' ಎಂದು ಕೂಗಿದವನೆ, ಬಗ್ಗಿ ಕಲ್ಲು ಎತ್ತಿ ತ್ಯಾಗನ ಕಡೆಗೆ ಬೀಸಿದ. ನಾಲ್ಕೈದು ಬೀಸುಗಲ್ಲಿನಿಂದ ತಪ್ಪಿಸಿಕೊಂಡನಾದರೂ ಒಂದೆರಡು ಕಲ್ಲುಗಳು ಮೈಗೆ ಬಿದ್ದು ಪೆಟ್ಟಾಗಿದ್ದರೂ ಸೀಳು ನಾಯಿಯಿಂದ ಬಿಡಿಸಿಕೊಂಡ ಜಿಂಕೆ ಮರಿಯಂತೆ ಓಡುತ್ತಿದ್ದ. ದೇವರ ಹುಣಸೆ ಮರ, ಐನೋರ ಗದ್ದೆ ಆ ಬದು, ಈ ಬದು ದಾಟಿ ಓಡೋಹೊತ್ತಿಗೆ ಹಿಂದಿನಿಂದ ಇನ್ನೊಂದು ಎತ್ತುಂಡಿ ದಬ್ಬನೆ ಬಿತ್ತು, ಅದೇನೋ ಕತ್ತಿಗೆ ಬಲವಾದ ಪ್ರಾಣಿಯೊಂದು ಬಾಯಾಕಿದಂತೆ. ತ್ಯಾಗನಿಗೆ ಉಸಿರು ಸಿಕ್ಕಿ ಪಕ್ಕೆ ಹಿಡಿದು ಕೆಳಗೆ ಬಿದ್ದನು.

ಮಲ್ಲನು ಸಿಟ್ಟಿನಿಂದ ತ್ಯಾಗನಿಗೆ ಮಚ್ಚು ಬೀಸಿ 'ಥೂ...' ಎಂದು ನೊರ ನೊರ ಹಲ್ಲು ಕಡಿದ. ಭ್ರಾಂತಿ ಇರುವ ಮನುಷ್ಯ, ಕರುಣೆ ಎಲ್ಲಿ ಹುಟ್ಟುತ್ತದೆ. ತ್ಯಾಗನ ಮೈಯಿಂದ ರಕ್ತ ಚಿಮ್ಮಿತು. ತ್ಯಾಗನ ಕಣ್ಣೊಳಗೆ ಜೀವ ಹೋಗುತ್ತಾ, ಹೋಗುತ್ತಾ ಅತ್ತಿತ್ತ ಕಣ್ಣುಗಳು ಪಿಳಿಗುಡುತ್ತಿದ್ದವು. ಇದು ಸಮಾಜಕ್ಕೆ ದುರಂತವೇ ಸರಿ ಎಂದು ಸುತ್ತಲ ಜಲಚರ ಪ್ರಾಣಿ ಪಕ್ಷಿ ನಭದ ನಕ್ಷತ್ರ ಮಮ್ಮಲ ಮರುಗಿದವು. ಕೈಕಾಲುಗಳು ಕತ್ತರಿಸಿ ಹಾಕಿದ ಮರಿಯ ಮುಂಡದಂತೆ ಅಲುಗುತ್ತಿದ್ದವು, ತಾಯಿಯನ್ನು ತಬ್ಬಲೋ ಎಂಬಂತೆ, ರಕ್ಷಣೆಗಾಗಿ ತಂದೆಯ ಹುಡುಕಾಡುವಂತೆ ತ್ಯಾಗ ಕೈಗಳನ್ನು ಮೇಲಕ್ಕೆತ್ತುತ್ತಿದ್ದ. ಕರುಣೆ ಎಂದರೆ ಇನ್ನೊಬ್ಬರಿಗಾಗಿ ಜೀವ ಮಿಡಿಯುವುದು, ತನಗೆ ತಾನೇ ಮಿಡಿದಂತೆ, ಆದರೆ ಇಲ್ಲಿ ಹಾಗಾಗಲಿಲ್ಲ. ಒದರಾಟ ನಿಲ್ಲಿಸಲು ಮಲ್ಲನು ಕಾಲಿನಿಂದ ಕತ್ತು ಅದುಮಿದ. ವದರಾಟ ನಿಂತ ಮೇಲೆ ಮಲ್ಲನು ತೋಟದಲ್ಲಿದ್ದ ಎಡೆಮಟ್ಟೆ ವಟ್ಟಲ್ಲಿ ಹಾಕಿ ಕಡ್ಡಿ ಗೀರಿ ಬೆಂಕಿ ಹಚ್ಚಿದ. ಧಗ ಧಗ ಧಗ ಉರಿ ಮುಗಿಲು ಮುಟ್ಟಿತು. ಜ್ವಾಲೆ ಸುತ್ತುವರಿದು ಆವರಿಸಿತು. ಸುಟ್ಟ ನಿಗಿ ನಿಗಿ ಕೆಂಡಗಳು ಸುಟ್ಟು ಬೂದಿ ಮಾಡಿದ ಆ ದುಃಖ ಯಾರಿಗಾದರೂ ಹೇಳಿಯಾದರೂ ತನ್ನ ದುಃಖ ತಣ್ಣಗೆ ಮಾಡಿಕೊಳ್ಳಲು ಭೂಮಿಯ ನಾಕಾಮೂಲೆಯ ಕೆಂಡದ ಉಂಡೆಗಳು ತಡಕಾಡಿದವು. ಆ ಭೀಕರ ದೃಶ್ಯ ನೋಡಿದ ಮೋಡದ ಕಣ್ಣಲ್ಲಿ ನೀರು ತುಂಬಿ ತುಳುಕಿದವು. ಇಂಥ ದುರಂತ ಕಣ್ಣಿಂದ ನೋಡಬೇಕಾಯಿತಲ್ಲಾ ಎಂದು ಎಲೆ ಬಳ್ಳಿ ಸಂಪಿಗೆ ತೊರೆ ಹಳ್ಳ ಇಡೀ ಭೂಮಂಡಲವ ತಬ್ಬಿ ದುಃಖಿಸಿದವು. ಪ್ರೀತಿಯ ಬದುಕಿಗೆ ಬೆನ್ನೊರಗಿ ಬದುಕಿನಲ್ಲಿ ಮಾಡಬಾರದ್ದ ಮಾಡಿ ಕಾಲ ಹಾಕುವ ಒಂದು ವರ್ಗ ಇದೆ, ಕಣ್ಣು ಬಿಟ್ಟು ನೋಡಿ ಎಂದು ಕನವರಿಸಿ ಸುಟ್ಟ ಆ ಕರಕಲು ವಾಸನೆ ಊರವರ ಮೂಗಿಗೆ ಬಡಿಯುತ್ತಿತ್ತು.

ಆಕಾಶ ಕಪ್ಪು ಸಾಗರದಂತೆ ಕಂಡಿತು. ಆಗ ಚಂದ್ರನಿಗೆ ವಸ್ತುವಿನ ಪ್ರಶ್ನೆ, ವಸ್ತುನಿಷ್ಠ ಪ್ರಶ್ನೆ, ನಿಜವಾಗಿಯೂ ತನ್ನೊಳಗಿನ ಬೆಳಕಿನೊಂದಿಗೆ ಗಾಳಿ ನೀರು ಬೆರೆತು ಸದಾ ಹಸಿರು ಚಿಗುರು ಕಂಪು ಸೂಸುವ ಹಿತ್ತಲ ಕೆಂಡಸಂಪಿಗೆ ಇದ್ದಕ್ಕಿದ್ದಂತೆ ತನ್ನಂತೆಯೇ ಮೌನವಾಗಿರುವುದ ಕಂಡು ಎಲ್ಲಿಲ್ಲದ ಅಳು ಚಂದ್ರನಿಗೆ. ಬಾಯಿ ಕಟ್ಟಿತು, ಗಂಟಲು ಹಿಡಿದ ಬಿಕ್ಕಳಿಕೆ, ಆದರೂ ಹಿತ್ತಲ ಸಂಪಿಗೆಯ ಎಲೆಗಳು ಅತ್ತಿತ್ತ ಅಲುಗಲಿಲ್ಲ, ಸಂಪಿಗೆಯ ಹೂ ಕಂಪು ಕದಡಲಿಲ್ಲ. ಈಗ ಚಂದ್ರನಿಗೆ ಶಾಂತಚಿತ್ತವನ್ನು ಕದಡುವ ಅಶಾಂತಿ. ಪ್ರಕೃತಿ ತುಂಬಾ ಆಯಾಸ. ಚಂದ್ರನಿಗೆ ಹೊಟ್ಟೆಯಲ್ಲಿ ಅಸಾಧ್ಯ ನೋವು. ಸಿದ್ದ ಹೋಗುವಾಗಲೂ ಇಷ್ಟೊಂದು ನೋವು ಎದೆಗೆ ತಿವಿದಿರಲಿಲ್ಲ. ತೀವ್ರವಾಗಿ ಸಂಪಿಗೆಯ ಎಳೆದು, ಸೆಳೆದು, ಚಂದ್ರ ತಬ್ಬಿತು. ಸಂಪಿಗೆಯ ಕಣ್ಣು, ಮೂಗು ತುಟಿಗಳು ವ್ಯಗ್ರವಾಗಿದ್ದವು. ದುಃಖವನ್ನು ಹೇಳುವಾಗ ಅಯ್ಯೋ ನಿಮ್ಮ ಕಣ್ಣಿಗೆ ನಿಮ್ಮ ಕಿವಿಗೆ ಬೀಳದ ಘಟನೆ ತ್ಯಾಗನ ಸಜೀವ ದಹನ ಎಂದಿತು. ಸಿಡಿಲು ಎರಗಿದಂತೆ ಭೂಮಿಗೆ ದುಃಖದ ಸೆರಗಲ್ಲಿ ಗಾಳಿ ಬೀಸಿತು.

ಜೀವೆಲ್ಲ ಝಲ್ಲೆಂದು ಲಬೋ ಲಬೋ<br>
ಒಂದಕ್ಕೊಂದು<br>
ಕೊರಳಿಗೆ ಕೊರಳ ತಬ್ಬಿ<br>
ದುಃಖಕ್ಕೆ ದುಃಖ ಪಲ್ಲವಿಸಿತು.

ತನ್ನ ಬಾಳಿನಲ್ಲಿ ಇಲ್ಲವಾಗಿಹೋದ ಸಿದ್ದನಿಗಾಗಿ ಚಂದ್ರ ಮೌನವಾಗಿ ಹಲುಬಿ ಹಂಬಲಿಸುತ್ತಿರುವ ಹೊತ್ತಿನಲ್ಲಿ ತ್ಯಾಗನ ಹತ್ಯೆಯೂ ಆಗಿಹೋಗಿದ್ದನ್ನು ಕಿವಿಯಾರ ಕೇಳಲಾರದೆ ಎಚ್ಚರತಪ್ಪಿ ಸಂಪಿಗೆಗೆ ಒರಗಿ ಚಂದ್ರ ಕುಸಿಯಿತು. ದುಃಖದ ಕಣ್ಣೀರ ವರೆಸಿ ಸಂಪಿಗೆ ಮುಟ್ಟಿತು. ಮೌನ ಹೃದಯ ನಡುಗಿತು. ಆಗಲೇ ಚಂದ್ರನ ಜೀವ ಕರಗಿ ದೇಹ ಕುಸಿದು ಮರುಗಿ ಪ್ರಾಣ ಹೋಯಿತು. ಆ ಗಾಳಿಯಲಿ ಒಂದಾಯಿತು.

* * *

ತ್ಯಾಗನವ್ವ ದ್ಯಾವಕ್ಕ ಸೊಂಟಕ್ಕೆ ಸೆರಗ